ಸಂಖ್ಯೆ: ಎ3/ಸಿಆರ್-11/2005-06

ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಮಂಗಳೂರು ವೃತ್ತ, "ಅರಣ್ಯ ಭವನ", ಅಳಪೆ, ಪಡೀಲು,
ಮಂಗಳೂರು-7, ದಿನಾಂಕ: 20-07-2019.

ಇವರಿಗೆ,

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ),
ಅರಣ್ಯ ಭವನ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು-560003.

ಮಾನ್ಯರೇ,

ವಿಷಯ: Diversion of 0.80 ha. of Reserved Forest land in Sy No. 125/P of Sampaje village, Sulya Taluk, Dakshina Kannada District, Mangalore Division for construction of 33/11 KV substation at Rajarampura in favour of the Executive Engineer (Elec), MESCOM, Puttur Division.

ಉಲ್ಲೇಖ:
1. ತಮ್ಮ ಕಛೇರಿ ಪತ್ರ ಸಂಖ್ಯೆ: ಎ5(2). ಜಿಎಫ್ಎಲ್. ಸಿಆರ್.09/2005-06 ದಿನಾಂಕ 18-6-2013.
2. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 27.02.2018.
3. ಈ ಕಛೇರಿ ಪತ್ರ ಸಂಖ್ಯೆ: ಎ3/ಡಿಎಫ್ಎಲ್/ಸಿಆರ್-28/2005-06 (ಮೆಸ್ಕಾಂ), ದಿನಾಂಕ 21.02.2018.
4. ಈ ಕಛೇರಿ ಪತ್ರ ಸಂಖ್ಯೆ: ಎ3/ಡಿಎಫ್ಎಲ್/ಸಿಆರ್-18/2005-06 (ಮೆಸ್ಕಾಂ), ದಿನಾಂಕ 19.08.2017.
5. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರ ಕಚೇರಿ ಪತ್ರ ಸಂಖ್ಯೆ: ಭೂಶಾಖೆ/ಕೆ.ವಿ.ಸ್ಟೇಷನ್.11/2004-05, ದಿನಾಂಕ 15.07.2019.

*************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸಲು 0.80 ಹೆ. ಅರಣ್ಯ ಭೂಮಿಯನ್ನು ಬಿಡುಗಡೆಗೊಳಿಸಲು ಸಲ್ಲಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಲ್ಲೇಖ(2)ರ ಈ ಕಛೇರಿ ಪತ್ರದಲ್ಲಿ ಯೋಜನೆಗೆ ಅತ್ಯವಶ್ಯಕವಾಗಿರುವ ಜಮೀನಿಗೆ ಅಗತ್ಯವಿರುವ ಉಳಿದೆಲ್ಲಾ ನಿರಾಕ್ಷೇಪಣಾ / ಅನುಮತಿಗಳನ್ನು ಪಡೆಯುವ ಷರತ್ತಿಗೊಳಪಡಿಸುವುದರೊಂದಿಗೆ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರಡಿಯಲ್ಲಿ ಅನುಮತಿ ನೀಡಬಹುದೆಂದು ಅಭಿಪ್ರಾಯಿಸಿ, ಆನ್‌ಲೈನ್‌ನಲ್ಲಿ ಪ್ರಸ್ತಾವನೆಯನ್ನು ನಿಗಧಿತ ನಮೂನೆಗಳ ಭಾಗ -IIIನ್ನು ಭರ್ತಿ ಮಾಡಿ ಈಗಾಗಲೇ ಸಲ್ಲಿಸಲಾಗಿದ್ದು, ಸದ್ರಿ ಯೋಜನೆಗೆ ಅನುಮೋದನೆ ನೀಡುವ ಸಮಯದಲ್ಲಿ ಮೆಸ್ಕಂ ವತಿಯಿಂದ ಕೈಗೊಂಡ ಯೋಜನೆಗಳಲ್ಲಿ 3 ಪ್ರಕರಣಗಳ ಬಗ್ಗೆ ಗಣನೆಗೆ ತೆಗೆದುಕೊಳ್ಳುವಂತೆ ವರದಿಯನ್ನು ತಮಗೆ ಸಲ್ಲಿಸಲಾಗಿರುತ್ತದೆ. ಅದರಂತೆ www.forestsclearance.nic.in ವೆಬ್‌ಸೈಟ್‌ನಲ್ಲಿ ಪ್ರಸ್ತಾವನೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರ ಕಛೇರಿಗೆ ಹಿಂದಿರುಗಿಸಲಾಗಿರುತ್ತದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ವರದಿಸಿರುತ್ತಾರೆ.

ಮೆಸ್ಕಾಂ ಸಂಸ್ಥೆಯ 2 ಪ್ರಕರಣಗಳಿಗೆ ಸಂಬಂಧಿಸಿದಂತೆ ವರದಿಯನ್ನು ಉಲ್ಲೇಖ (3) ಮತ್ತು (4)ರಲ್ಲಿ ತಮ್ಮ ಕಛೇರಿಗೆ ಈಗಾಗಲೇ ಸಲ್ಲಿಸಲಾಗಿರುತ್ತದೆ. ಉಳಿದಿರುವ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ಮೆಸ್ಕಾಂ) ಸುಳ್ಯ ಉಪ ವಿಭಾಗ ಇವರು ಮುಚ್ಚಳಿಕೆ ಪತ್ರವನ್ನು ದಿನಾಂಕ:29-1-2019 ಮತ್ತು 29-3-2019 ರಂದು www.forestsclearance.nic.in ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ್ದು, **(ಪ್ರತಿ ಲಗತ್ತಿಸಿದೆ)** ಸದ್ರಿ ಮುಚ್ಚಳಿಕೆ ಪತ್ರದಲ್ಲಿ ಈ ಹಿಂದೆ ಪಂಜ ವಲಯದ ಎಣ್ಮೂರಿನಲ್ಲಿ ಕಾದಿರಿಸಿದ ಅರಣ್ಯದೊಳಗೆ

ಹೇಮಳ ಹ್ಯಾಮ್ಲೆಟ್ ಯೋಜನೆಯಡಿ 23 ಮನೆಗಳಿಗೆ ಘನ ಸರಕಾರದ ಉಪಗ್ರಾಮಗಳ ವಿದ್ಯುದ್ದೀಕರಣ ಯೋಜನೆಯಡಿ ವಿದ್ಯುತ್ ಸಂಪರ್ಕ ಒದಗಿಸುವ ಸಂದರ್ಭದಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980ನ್ನು ಪಾಲಿಸದಿರುವ ಕಾರಣ ಸದ್ರಿ ಮೇಲ್ಕಾಣಿಸಿದ ಉದ್ದೇಶಿತ ಪ್ರಸ್ತಾವನೆಯ ಅನುಮತಿ ಪ್ರಕ್ರಿಯೆ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ನ್ನು ಪಾಲಿಸುವ ದೃಷ್ಟಿಯಿಂದ ಇಲಾಖೆಯಿಂದ ಪಾವತಿಸಬೇಕಾಗಿರುವ ನೆಟ್ ಪ್ರೆಸೆಂಟ್ ವ್ಯಾಲ್ಯೂ (NPV) ಪರಿಹಾರಾತ್ಮಕ ನೆಡುತೋಪುಗಳ ವೆಚ್ಚ (CA Land) ಹಾಗೂ ವಿಧಿಸುವ ದಂಡನೆಯನ್ನು ಇಲಾಖೆಯು ಪಾವತಿಸಲು ಬದ್ಧರಿರುವ ಬಗ್ಗೆ ಮುಚ್ಚಳಿಕೆ ನೀಡಿರುವುದಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ವರದಿಸಿರುತ್ತಾರೆ.

ಆದ್ದರಿಂದ ಸುಳ್ಯ ತಾಲೂಕು ಎಣ್ಮೂರು ಗ್ರಾಮದ ಹೇಮಳ ಎಂಬಲ್ಲಿ ಎಣ್ಮೂರು ಮೀಸಲು ಅರಣ್ಯದೊಳಗೆ 33 ಕೆ.ವಿ. ವಿದ್ಯುತ್ ಲೈನನ್ನು ಎಳೆಯಲು 0.131 ಹೆ. ಅರಣ್ಯ ಪ್ರದೇಶವನ್ನು ಪೂರ್ವಾನುಮತಿ ಪಡೆಯದೇ ಯೋಜನೆಯು ಈಗಾಗಲೇ ಅನುಷ್ಠಾನಗೊಂಡಿರುವುದರಿಂದ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಯಾವುದೇ ಮರಗಳನ್ನು ಕಡಿಯದೆ ಅಸ್ತಿತ್ವದಲ್ಲಿದ್ದು, ರಸ್ತೆಯ ಬದಿಯಲ್ಲಿಯೇ ವಿದ್ಯುತ್ ಲೈನನ್ನು ಎಳೆದಿರುವುದರಿಂದ ಈಗ ಯಾವುದೇ ಮರಗಳನ್ನು ಕಡಿಯುವ ಅಗತ್ಯತೆ ಇಲ್ಲದಿರುವುದರಿಂದ ಹಾಗೂ ಯೋಜನೆಗಾಗಿ ತೀರಾ ಅಗತ್ಯವಿರುವ 0.131ಹೆ. ಪ್ರದೇಶವನ್ನು ಮಾತ್ರ ಸಾರ್ವಜನಿಕರ ಹಿತದೃಷ್ಟಿಯಿಂದ ಪೂರ್ವಾನುಮತಿ ಪಡೆಯದೇ ಬಳಸಿಕೊಂಡು ಅರಣ್ಯ (ಸಂರಕ್ಷಣಾ) ಕಾಯ್ದೆಯ ಉಲ್ಲಂಘನೆ ಮಾಡಿರುವುದಕ್ಕೆ ಚಾಲ್ತಿ ದರದಲ್ಲಿ ಎನ್.ಪಿ.ವಿ., ಸಿ.ಎ. ಮತ್ತು ಪಿ.ಸಿ.ಎ. ಮೊತ್ತವನ್ನು ಪಾವತಿಸಲು ಬದ್ಧರಿರುವುದಾಗಿ ಮುಚ್ಚಳಿಕೆ ಪತ್ರವನ್ನು ಉಪಯೋಗಿ ಸಂಸ್ಥೆಯವರಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ಮೆಸ್ಕಂ) ಸುಳ್ಯ ಉಪ ವಿಭಾಗ ಇವರು ಈಗ ನೀಡಿರುವುದರಿಂದ ಅರಣ್ಯ (ಸಂರಕ್ಷಣಾ) ಕಾಯ್ದೆ ಉಲ್ಲಂಘನೆ ಮಾಡಿರುವುದಕ್ಕೆ ಈಗಿನ ಚಾಲ್ತಿ ದರದಲ್ಲಿ ಎನ್.ಪಿ.ವಿ, ಸಿ.ಎ. ಮತ್ತು ಪಿ.ಸಿ.ಎ. ಮೊತ್ತವನ್ನು ಪಾವತಿಸಲು ಬೇಡಿಕೆ ಪತ್ರವನ್ನು ನೀಡಿರುವುದಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ವರದಿಸಿರುತ್ತಾರೆ.

ಆದ್ದರಿಂದ ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ 0.80 ಹೆ. ನಷ್ಟು ಭೂಮಿಯನ್ನು ಅಗತ್ಯವಿರುವ ಉಳಿದೆಲ್ಲಾ ನಿರಾಕ್ಷೇಪಣಾ / ಅನುಮತಿಗಳನ್ನು ಪಡೆಯುವ ಷರತ್ತಿಗೊಳಪಡಿಸುವುದರೊಂದಿಗೆ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರನ್ವಯ ಮೊದಲ ಹಂತದ (Stage-I) ಅನುಮೋದನೆ ನೀಡುವ ಸಂದರ್ಭ ನಿಬಂಧನೆಯಲ್ಲಿ ಹೇಮಳ-ಹ್ಯಾಮ್ಲೇಟ್ ಯೋಜನೆಗೆ ಸಂಬಂಧಿಸಿದಂತೆ ಎನ್.ಪಿ.ವಿ., ಸಿ.ಎ. ಮತ್ತು ಪಿ.ಸಿ.ಎ. ಮೊತ್ತವನ್ನು ಪಾವತಿಸುವ ಷರತ್ತನ್ನು ಸೇರ್ಪಡೆಗೊಳಿಸಿ ಅನುಮತಿ ನೀಡಬಹುದೆಂದು ಅಭಿಪ್ರಾಯಿಸಿ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ಉಲ್ಲೇಖ(3)ರಲ್ಲಿ ಸಲ್ಲಿಸಿದ ಪತ್ರದ ಪ್ರತಿ ಮತ್ತು ಅಡಕಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಮಂಡಿಸಿದೆ.

ತಮ್ಮ ನಂಬುಗೆಯ,

ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವೃತ್ತ, ಮಂಗಳೂರು.

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ದೂರವಾಣಿ :0824 – 2423913
0824 – 2411242
ಇ-ಮೇಲ್:dcf_mngt@yahoo.co.in
dcfmng@aranya.gov.in

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು ವಿಭಾಗ, ಪಿ.ಡಬ್ಲ್ಯೂ.ಡಿ.ಕಟ್ಟಡ, ನೆಹರೂ ಮೈದಾನದ ಬಳಿ ಮಂಗಳೂರು 575001

ಸಂ: ಭೂಶಾಖೆ. ಕೆ.ವಿ. ಸ್ಟೇಷನ್.11/2004–05
Proposal No . FP/KA/TRANS/24339/2017.

ದಿನಾಂಕ:15–7–2019.

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವೃತ್ತ,
ಮಂಗಳೂರು.

ಮಾನ್ಯರೇ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಮಂಗಳೂರು ವೃತ್ತ, ಮಂಗಳೂರು
19 JUL 2019
ಶಾಖೆ : ...ಎ3...
ಸಂಖ್ಯೆ: ...2069...

19/7/19

121
19-7-19

ವಿಷಯ : Diversion of 0.80 ha. of Reserved Forest land in Sy No. 125/P of Sampaje village, Sulya Taluk, Dakshina Kannada District, Mangalore Division for construction of 33/11 KV substation at Rajarampura in favour of the Executive Engineer (Elec), MESCOM, Puttur Division.

ಉಲ್ಲೇಖ
1. ನೋಡಲ್ ಅಧಿಕಾರಿ ಹಾಗೂ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರ ಪತ್ರ ಸಂಖ್ಯೆ. ಎ5(2). ಜಿಎಫ್ಎಲ್. ಸಿಆರ್.09/2005–06 ದಿನಾಂಕ: 18–6–2013.
2. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:15–9–2017.
3. ತಮ್ಮ ಕಛೇರಿ ಅರೆ ಸರ್ಕಾರಿ ಪತ್ರ ಸಂಖ್ಯೆ ಎ3/ಸಿಆರ್.11/2005–06, ದಿನಾಂಕ:03–10–2017 ಮತ್ತು ಪತ್ರ ದಿನಾಂಕ:19–12–2017.
4. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:29–1–2018.
5. ತಮ್ಮ ಕಛೇರಿ ಪತ್ರ ಸಂಖ್ಯೆ ಎ3/ಸಿಆರ್.11/2005–06, ದಿನಾಂಕ: 27–2–2018.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ಮೆಸ್ಕಾಂ) ಸುಳ್ಯ ಉಪ ವಿಭಾಗ ಇವರ ಮುಚ್ಚಳಿಕೆ ಪತ್ರ ದಿನಾಂಕ:29–1–2019 ಮತ್ತು ದಿನಾಂಕ:29–3–2019.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸಲು 0.80 ಹೆ. ಅರಣ್ಯ ಭೂಮಿಯನ್ನು ಬಿಡುಗಡೆಗೊಳಿಸಲು ಸಲ್ಲಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಲ್ಲೇಖ(2)ರ ಈ ಕಛೇರಿ ಪತ್ರದಲ್ಲಿ ಯೋಜನೆಗೆ ಅತ್ಯವಶ್ಯಕವಾಗಿರುವ ಜಮೀನಿಗೆ ಅಗತ್ಯವಿರುವ ಉಳಿದೆಲ್ಲಾ ನಿರಾಕ್ಷೇಪಣಾ / ಅನುಮತಿಗಳನ್ನು ಪಡೆಯುವ ಷರತ್ತಿಗೊಳಪಡಿಸುವುದರೊಂದಿಗೆ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರಡಿಯಲ್ಲಿ ಅನುಮತಿ ನೀಡಬಹುದೆಂದು ಅಭಿಪ್ರಾಯಿಸಿ, ಆನ್‌ಲೈನ್‌ನಲ್ಲಿ ಪ್ರಸ್ತಾವನೆಯನ್ನು ನಿಗಧಿತ ನಮೂನೆಗಳ ಭಾಗ –2 ನ್ನು ಭರ್ತಿ ಮಾಡಿ ಸಲ್ಲಿಸಲಾಗಿರುತ್ತದೆ.

ನಂತರ ಉಲ್ಲೇಖ(3)ರ ತಮ್ಮ ಕಛೇರಿ ಪತ್ರದಲ್ಲಿ ಈ ಪ್ರಸ್ತಾವನೆಯನ್ನು ಹೊರತುಪಡಿಸಿ ಇತರ 3 ಪ್ರಕರಣಗಳಲ್ಲಿ MESCOM ವತಿಯಿಂದ ನಿಬಂಧನೆ / ಷರತ್ತುಗಳು ಉಲ್ಲಂಘನೆಯಾಗಿದ್ದು, ಅದರಲ್ಲಿ ಒಂದು ಪ್ರಕರಣವು ಮಹಾಲೇಖಪಾಲರ ಆಕ್ಷೇಪಣೆಯಲ್ಲಿ ಒಳಗೊಂಡಿರುವುದಾಗಿ ತಿಳಿಸಿ ಸದ್ರಿ ಪ್ರಕರಣಗಳ ಅಂಶಗಳಿಗೆ ಅಗತ್ಯ ದಾಖಲೆಗಳನ್ನು ಉಪಯೋಗಿ ಸಂಸ್ಥೆಯಿಂದ ಪಡೆದುಕೊಂಡು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಅದರಂತೆ ಉಲ್ಲೇಖ(4)ರಲ್ಲಿ ಮೆಸ್ಕಾಂ ಸಂಸ್ಥೆಯ 2 ಪ್ರಕರಣಗಳಿಗೆ ಸಂಬಂಧಿಸಿದಂತೆ ವರದಿಯನ್ನು ತಮ್ಮ ಕಛೇರಿಗೆ ಸಲ್ಲಿಸಿ, ಉಳಿದಿರುವ 01 ಪ್ರಕರಣಗಳಿಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರು ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಮಾಡಿರುವ ಬಗ್ಗೆ ಈ ಕಛೇರಿಯಿಂದ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ಮೆಸ್ಕಾಂ, ಪುತ್ತೂರು ಉಪ ವಿಭಾಗ ಇವರಿಗೆ ಪತ್ರವನ್ನು ಬರೆದು ಅಗತ್ಯ ಮಾಹಿತಿಯನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. **(ಪತ್ರದ ಪ್ರತಿಯನ್ನು ಲಗತ್ತಿಸಿದೆ).**

ಈ ಮಧ್ಯೆ, ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸಲು 0.80 ಹೆ. ಅರಣ್ಯ ಭೂಮಿಯನ್ನು ಬಿಡುಗಡೆಗೊಳಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ತಮ್ಮ ಕಛೇರಿಯಿಂದ ಉಲ್ಲೇಖ(5)ರಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರಿಗೆ ಸಲ್ಲಿಸಿ, ಸದ್ರಿ ಯೋಜನೆಗೆ ಅನುಮೋದನೆ ನೀಡುವ ಸಮಯದಲ್ಲಿ ಮೆಸ್ಕಂ ವತಿಯಿಂದ ಕೈಗೊಂಡ ಯೋಜನೆಗಳ ಬಗ್ಗೆ ಗಣನೆಗೆ ತೆಗೆದುಕೊಳ್ಳುವಂತೆ ವರದಿಯನ್ನು ಸಲ್ಲಿಸಿ, www.forestsclearance.nic.in ವೆಬ್‌ಸೈಟ್‌ನಲ್ಲಿ ಪ್ರಸ್ತಾವನೆಯನ್ನು ಈ ಕಛೇರಿಗೆ ಹಿಂದಿರುಗಿಸಲಾಗಿರುತ್ತದೆ.

ಅದರಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ಮೆಸ್ಕಂ) ಸುಳ್ಯ ಉಪ ವಿಭಾಗ ಇವರು ಮುಚ್ಚಳಿಕೆ ಪತ್ರವನ್ನು ದಿನಾಂಕ:29-1-2019 ಮತ್ತು 29-3-2019 ರಂದು www.forestsclearance.nic.in ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ್ದು, **(ಪ್ರತಿ ಲಗತ್ತಿಸಿದೆ)** ಸದ್ರಿ ಮುಚ್ಚಳಿಕೆ ಪತ್ರದಲ್ಲಿ ಈ ಹಿಂದೆ ಪಂಜ ವಲಯದ ಎಣ್ಮೂರುನಲ್ಲಿ ಕಾದಿರಿಸಿದ ಅರಣ್ಯದೊಳಗೆ ಹೇಮಳ ಹ್ಯಾಮ್ಲೆಟ್ ಯೋಜನೆಯಡಿ 23 ಮನೆಗಳಿಗೆ ಘನ ಸರಕಾರದ ಉಪಗ್ರಾಮಗಳ ವಿದ್ಯುದ್ದೀಕರಣ ಯೋಜನೆಯಡಿ ವಿದ್ಯುತ್ ಸಂಪರ್ಕ ಒದಗಿಸುವ ಸಂದರ್ಭದಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980ನ್ನು ಪಾಲಿಸದಿರುವ ಕಾರಣ ಸದ್ರಿ ಮೇಲ್ಕಾಣಿಸಿದ ಉದ್ದೇಶಿತ ಪ್ರಸ್ತಾವನೆಯ ಅನುಮತಿ ಪ್ರಕ್ರಿಯೆ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ನ್ನು ಪಾಲಿಸುವ ದೃಷ್ಟಿಯಿಂದ ಇಲಾಖೆಯಿಂದ ಪಾವತಿಸಬೇಕಾಗಿರುವ ನೆಟ್ ಪ್ರೆಸೆಂಟ್ ವ್ಯಾಲ್ಯೂ (NPV) ಪರಿಹಾರಾತ್ಮಕ ನೆಡುತೋಪುಗಳ ವೆಚ್ಚ (CA Land) ಹಾಗೂ ವಿಧಿಸುವ ದಂಡನೆಯನ್ನು ಇಲಾಖೆಯು ಪಾವತಿಸಲು ಬದ್ಧರಿರುವ ಬಗ್ಗೆ ಈ ಮೂಲಕ ಮುಚ್ಚಳಿಕೆ ನೀಡಿರುತ್ತಾರೆ.

ಆದ್ದರಿಂದ ಸುಳ್ಯ ತಾಲೂಕು ಎಣ್ಮೂರು ಗ್ರಾಮದ ಹೇಮಳ ಎಂಬಲ್ಲಿ ಎಣ್ಮೂರು ಮೀಸಲು ಅರಣ್ಯದೊಳಗೆ 33 ಕೆ.ವಿ. ವಿದ್ಯುತ್ ಲೈನನ್ನು ಎಳೆಯಲು 0.131 ಹೆ. ಅರಣ್ಯ ಪ್ರದೇಶವನ್ನು ಪೂರ್ವಾನುಮತಿ ಪಡೆಯದೇ ಯೋಜನೆಯು ಈಗಾಗಲೇ ಅನುಷ್ಠಾನಗೊಂಡಿರುವುದರಿಂದ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಯಾವುದೇ ಮರಗಳನ್ನು ಕಡಿಯದೆ ಅಸ್ತಿತ್ವದಲ್ಲಿದ್ದು, ರಸ್ತೆಯ ಬದಿಯಲ್ಲಿಯೇ ವಿದ್ಯುತ್ ಲೈನನ್ನು

ಎಳೆದಿರುವುದರಿಂದ ಈಗ ಯಾವುದೇ ಮರಗಳನ್ನು ಕಡಿಯುವ ಅಗತ್ಯತೆ ಇಲ್ಲದಿರುವುದರಿಂದ ಹಾಗೂ ಯೋಜನೆಗಾಗಿ ತೀರಾ ಅಗತ್ಯವಿರುವ 0.131 ಹೆ. ಪ್ರದೇಶವನ್ನು ಮಾತ್ರ ಸಾರ್ವಜನಿಕರ ಹಿತದೃಷ್ಟಿಯಿಂದ ಪೂರ್ವಾನುಮತಿ ಪಡೆಯದೇ ಬಳಸಿಕೊಂಡು ಅರಣ್ಯ ಸಂರಕ್ಷಣಾ ಕಾಯ್ದೆಯ ಉಲ್ಲಂಘನೆ ಮಾಡಿರುವುದಕ್ಕೆ ಚಾಲ್ತಿ ದರದಲ್ಲಿ ಎನ್.ಪಿ.ವಿ., ಸಿ.ಎ. ಮತ್ತು ಪಿ.ಸಿ.ಎ. ಮೊತ್ತವನ್ನು ಪಾವತಿಸಲು ಬದ್ಧರಿರುವುದಾಗಿ ಮುಚ್ಚಳಿಕೆ ಪತ್ರವನ್ನು ಉಪಯೋಗಿ ಸಂಸ್ಥೆಯವರಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ಮೆಸ್ಕಂ) ಸುಳ್ಯ ಉಪ ವಿಭಾಗ ಇವರು ಈಗ ನೀಡಿರುವುದರಿಂದ ಅರಣ್ಯ (ಸಂರಕ್ಷಣಾ) ಕಾಯ್ದೆ ಉಲ್ಲಂಘನೆ ಮಾಡಿರುವುದಕ್ಕೆ ಈಗಿನ ಚಾಲ್ತಿ ದರದಲ್ಲಿ ಎನ್.ಪಿ.ವಿ, ಸಿ.ಎ. ಮತ್ತು ಪಿ.ಸಿ.ಎ. ಮೊತ್ತವನ್ನು ಪಾವತಿಸಲು ಬೇಡಿಕೆ ಪತ್ರವನ್ನು ನೀಡಲಾಗಿರುತ್ತದೆ.

ಆದ್ದರಿಂದ ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ 0.80 ಹೆ. ನಷ್ಟು ಭೂಮಿಯನ್ನು ಅಗತ್ಯವಿರುವ ಉಳಿದೆಲ್ಲಾ ನಿರಾಕ್ಷೇಪಣಾ / ಅನುಮತಿಗಳನ್ನು ಪಡೆಯುವ ಷರತ್ತಿಗೊಳಪಡಿಸುವುದರೊಂದಿಗೆ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರನ್ವಯ ಮೊದಲ ಹಂತದ (Stage-I) ಅನುಮೋದನೆ ನೀಡುವ ಸಂದರ್ಭ ನಿಬಂಧನೆಯಲ್ಲಿ ಹೇಮಳ–ಹ್ಯಾಮ್ಲೇಟ್ ಯೋಜನೆಗೆ ಸಂಬಂಧಿಸಿದಂತೆ ಎನ್.ಪಿ.ವಿ., ಸಿ.ಎ. ಮತ್ತು ಪಿ.ಸಿ.ಎ. ಮೊತ್ತವನ್ನು ಪಾವತಿಸುವ ಷರತ್ತನ್ನು ಸೇರ್ಪಡೆಗೊಳಿಸಿ ಅನುಮತಿ ನೀಡಬಹುದೆಂದು ಅಭಿಪ್ರಾಯಿಸಿ ವರದಿಯನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಮಂಗಳೂರು ವಿಭಾಗ, ಮಂಗಳೂರು.

AEE/SUL /5911 /2018-19 / 29-3-19

# Confidential Letter

For the purpose of providing efficient and consistent electricity supply for the people residing in Rajarampura , Sampaje Village and the area around its vicinity, an establishment of 33/11 KV Sub Station is proposed. The aforementioned request is already registered in **ForestClearance.nic.in** Web site for your approval Also during electrification of 23 houses in Hemala hamlet, Panja range under Government Scheme .it came to understanding that forest conversation act 1980 was not followed. Therefore for the purpose of following right protocol as per forest conversation act 1980.The department is ready to deposit net present value (NPV), compensatory afforestation cost (CA Land) and any penalty levied in near future. The above details are for you kind information.

Date :29-3-2019

Place :Sullia

Yours Faithfully

Asst.Exe.Engineer(Ele),
ಕಾರ್ಯನಿರ್ವಾಹಕ ಎ.
Sullia Sub-Division
ಮೆಸ್ಕಾಂ ಸುಳ್ಯ ಉಪವಿಭಾಗ

# ಮುಚ್ಚಳಿಕೆ ಪತ್ರ

ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸಂಪಾಜೆ ಹಾಗೂ ಅಸುಪಾಸಿನ ಗ್ರಾಮಗಳ ವಿದ್ಯುತ್ ಗ್ರಾಹಕರುಗಳಿಗೆ ನಿರಂತರ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ದೃಷ್ಟಿಯಿಂದ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಕ್ಕೆ ಸಂಪಾಜೆ ಮೀಸಲು ಅರಣ್ಯದ 0.8 ಹೆಕ್ಟೇರ್ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಳಸುವರೇ ಈಗಾಗಲೇ Forest Clearance.nic.in ವೆಬ್ ಸೈಟ್‌ನಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಅರಣ್ಯ ಇಲಾಖೆಯಿಂದ ಅನುಮತಿ ನೀಡುವರೇ ಈ ಹಿಂದೆ ಹಂಚ ವಲಯದ ಏಣ್ಮೂರುನಲ್ಲಿ ಕಾದಿರಿಸಿದ ಅರಣ್ಯದೊಳಗೆ ಹೇಮಳ ಹ್ಯಾಮ್ಲೆಟ್ ಯೋಜನೆಯಡಿ 23 ಮನೆಗಳಿಗೆ ಘನ ಸರಕಾರದ ಉಪಗ್ರಾಮಗಳ ವಿದ್ಯುದ್ದೀಕರಣ ಯೋಜನೆಯಡಿ ವಿದ್ಯುತ್ ಸಂಪರ್ಕ ಒದಗಿಸುವ ಸಂದರ್ಭದಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980ನ್ನು ಪಾಲಿಸದಿರುವ ಕಾರಣ ಸದ್ರಿ ಮೇಲ್ಕಾಣಿಸಿದ ಉದ್ದೇಶಿತ ಪ್ರಸ್ತಾವನೆಯ ಅನುಮತಿ ಪ್ರಕ್ರಿಯೆ ವಿಳಂಬವಾಗಿರುವ ಹಿನ್ನಲೆಯಿಂದ ಪ್ರಸ್ತುತ ಅರಣ್ಯ (ಸಂರಕ್ಷಣಾ) ಕಾಯ್ದೆ 1980ನ್ನು ಪಾಲಿಸುವ ದೃಷ್ಟಿಯಲ್ಲಿ ಇಲಾಖೆಯಿಂದ ಪಾವತಿಸಬೇಕಾಗಿರುವ ನೆಟ್ ಪ್ರಸೆಂಟ್ ವ್ಯಾಲ್ಯೂ(NPV) ಪರಿಹಾರಾತ್ಮಕ ನೆಡುತೋಪುಗಳ ವೆಚ್ಚ (CA Land) ಹಾಗೂ ವಿಧಿಸುವ ದಂಡನೆಯನ್ನು ಇಲಾಖೆಯು ಪಾವತಿಸಲು ಬದ್ಧವಿರುವ ಬಗ್ಗೆ ಈ ಮೂಲಕ ಮುಚ್ಚಳಿಕೆ ನೀಡಲಾಗಿದೆ.

ಸ್ಥಳ : ಪುತ್ತೂರು
ದಿನಾಂಕ : 29-01-2019

ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)
ಮೆಸ್ಕಾಂ, ಪುತ್ತೂರು ವಿಭಾಗ.